# ಚಾಜ ನಾಟಕದಲ್ಲಿ ಮಹಿಳಾ ಸಂವೇದನೆ

ಸುಮಾ ವಸಂತ ಸಾವಂತ

ಪ್ರಾಚಾರ್ಯರು, ಎ.ಜಿ.ಎಂ ಪದವಿ ಕಾಲೇಜು, ವರೂರ, ಧಾರವಾಡ.

Received: 24/09/2024 ; Acepted: 02/10/2024 ; Published: 05/11/2024

DOI: https://doi.org/10.5281/zenodo.14035359

## ABSTRACT:

ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಮಹಿಳೆಯರು ಕಥೆ-ಕಾದಂಬರಿ ಪ್ರಕಾರಗಳಲ್ಲಿ ಹೆಚ್ಚಿನ ಸಾಧನೆ ಮಾಡಿದ್ದಾರೆ. ಆದರೆ ರಂಗಭೂಮಿಯಲ್ಲಿ ನಾಟಕರಚನೆಗೆ ಸಂಬಂಧಿಸಿದಂತೆ ಅಂತಹ ದೊಡ್ಡಸಾಧನೆ ಕಾಣಿಸುವುದಿಲ್ಲ. ಆದರೆ ಇತ್ತೀಚಿನ ದಶಕಗಳಲ್ಲಿ ಮಹಿಳೆ ಅನೇಕ ಮಹತ್ವದ ನಾಟಕ ಕೃತಿಗಳನ್ನು ಕೊಟ್ಟಿದ್ದಾಳೆ. ಅಂತಹ ನಾಟಕಗಳಲ್ಲಿ ಚಾಜ ನಾಟಕವು ಒಂದಾಗಿದೆ. ಹಿಂದಿನ ಕಾಲದಿಂದಲೂ ಪುರುಷ ಪ್ರಧಾನತೆ, ಸಾಮ್ರಾಜ್ಯಶಾಹಿಗಳು, ಮತ್ತು ಪುರೋಹಿತಶಾಹಿತ್ವಗಳು ಎಲ್ಲವೂ ಒಟ್ಟಾಗಿಯೇ ಮಹಿಳೆಯರ ಮೇಲೆ ಹಲವಾರು ಕಟ್ಟುಪಾಡುಗಳನ್ನು ಹೊರಿಸಿವೆ. ಹೆಣ್ಣು ಭೋಗದ ವಸ್ತು ಎಂದು ಪುರುಷಪ್ರಧಾನ ವ್ಯವಸ್ಥೆಯು ಭಾವಿಸುತ್ತದೆ. ಪುರುಷನ ಅಧಿಕಾರತ್ವದಿಂದ ಅವನೇ ಹುಟ್ಟು ಹಾಕಿದ ಧರ್ಮ, ನಿಯಮಗಳು, ಗೊಡ್ಡು ಸಂಪ್ರದಾಯಗಳು, ಕಟ್ಟುಪಾಡುಗಳು ಹೆಣ್ಣನ್ನು ನಿರ್ದಾಕ್ಷಿಣ್ಯವಾಗಿ ನಡೆಸಿಕೊಳ್ಳುತ್ತವೆ. ಕುಟುಂಬ, ಉತ್ಪಾದನೆ, ಆಸ್ತಿ ಹೀಗೆ ಎಲ್ಲದರ ಮೇಲೆ ಪುರಷಾಧಿಪತ್ಯವೇ ಇರುತ್ತದೆ. ಈ ಕಾರಣದಿಂದಾಗಿ ದೇವದಾಸಿ ಪದ್ಧತಿ, ಬಾಲ್ಯವಿವಾಹ, ವಿಧವಾ ಸಮಸ್ಯೆ, ವರದಕ್ಷಿಣೆ, ಬೆತ್ತಲೆ ಸೇವೆ, ಸತಿಪದ್ಧತಿ, ಬಹುಪತ್ನಿತ್ವ ಮುಂತಾದ ಅನಿಷ್ಟ ಸಂಪ್ರದಾಯಗಳಿಗೆ ಹೆಣ್ಣನ್ನು ಸಿಲುಕಿಸಿ ಅವಳನ್ನು ನಿರಂತರ ಶೋಷಣೆಗೆ ಒಳಗುಮಾಡಲಾಗಿದೆ. ಮನುಸ್ಮೃತಿ ಮೊದಲಾದ ಕೃತಿಗಳಿಂದ ಹೆಣ್ಣಿನ ಸ್ವಾತಂತ್ರ್ಯಹರಣ ಮಾಡಿ ಪುರುಷಾಧೀನಗೊಳಿಸಲಾಯಿತು. ಇದು ಹೆಣ್ಣನ್ನು ಸಮಾಜದಲ್ಲಿ ಅತ್ಯಂತ ಕನಿಷ್ಠ ಸ್ಥಾನಕ್ಕೆ ಇಳಿಸಲು ಕಾರಣವಾಯಿತು.

ಯಾವುದೇ ಒಂದು ಸಂಸ್ಕೃತಿಯು ಮನುಷ್ಯರನ್ನು ಸಮಾಜ ಸಂಘಜೀವಿಯನ್ನಾಗಿ ಮಾಡಬೇಕು, ಅದು ಉತ್ತಮ ಸಂಸ್ಕೃತಿ. ಆದರೆ ಸಮಾಜದಲ್ಲಿ ಹಲವು ಆಚರಣೆ ಪದ್ಧತಿಗಳ ಮೂಲಕ ಜನರನ್ನು ದೌರ್ಜನ್ಯ, ತಾರತಮ್ಯಕ್ಕೆ ಒಳಗಾಗುವಂತೆ ಮಾಡುವ ಕೆಲವು ನಂಬಿಕೆಯ ಆಚರಣೆಗಳು ಹೀನವಾಗಿ ಅಸಹ್ಯವಾಗಿ ಕಂಡುಬರುತ್ತವೆ. ಈ ನಿಟ್ಟಿನಲ್ಲಿ ಮಲ್ಲಿಕಾ ಘಂಟಿಯವರ ಚಾಜ ನಾಟಕವು ಪುರುಷ ಪ್ರಧಾನತೆಯು ಹೆಣ್ಣನ್ನು ಸಾಂಸ್ಕೃತಿಕತೆಯ ನೆಲೆಯನ್ನು ಬಳಸಿಕೊಂಡು ಅನುಭೋಗಿಸುವ ನಡೆಯನ್ನು ಕಥಾವಸ್ತುವಾಗಿಸಿಕೊಂಡಿದೆ. ದ್ವೇಷವನ್ನು ಪ್ರೀತಿಯಿಂದ ಗೆಲ್ಲುವ, ದೌರ್ಜನ್ಯವನ್ನು ಉಧಾರತೆಯ ಮೂಲಕ ಸೋಲಿಸುವ, ಹಿಂಸೆಯನ್ನು ಉದಾತ್ತ ಮೌಲ್ಯಗಳ ಮೂಲಕ ಎದುರಾಗುವ ಆಶಯ ಇಂದು ನಿನ್ನೆಯದ್ದಲ್ಲ ಹಿಂದಿನಿಂದಲೂ ರೂಢಿಯಲ್ಲಿದೆ. 'ಚಾಜ' ಎಂದರೆ 'ನಿಯಮ' 'ಪದ್ಧತಿ' ಎಂದರ್ಥ. ಉತ್ತರ ಕರ್ನಾಟಕದ ಹೆಚ್ಚಿನ ಹಳ್ಳಿಗಳಲ್ಲಿ ಈ

ಚಾಜ ಪದ ಬಳಕೆಯಲ್ಲಿದೆ. ಜಮೀನ್ದಾರಿ ವ್ಯವಸ್ಥೆಯಲ್ಲಿ ಮದುವೆ ನಂತರ ಮನೆಗೆ ಬರಬೇಕಾದ ಸೊಸೆ ಊರ ಗೌಡನ ಅಥವಾ ದೇಸಾಯಿ ಮನೆಯಲ್ಲಿ ಅವನ ತೆಕ್ಕೆಯಲ್ಲಿ ಮೊದಲ ರಾತ್ರಿ ಕಳೆಯಬೇಕಾಗಿತ್ತು. ಹಬ್ಬ-ಹರಿದಿನದ ಎಲ್ಲಾ ಕ್ರಿಯೆಗಳು ಗೌಡ, ದೇಸಾಯಿಗಳ ಮನೆಯಿಂದ ಮತ್ತು ಅವರ ನಾಯಕತ್ವದಲ್ಲಿಯೇ ಆರಂಭಗೊಳ್ಳಬೇಕಾಗಿತ್ತು. ಮಹಿಳಾ ಸಂಘರ್ಷವನ್ನು ಬಿಂಬಿಸುವುದು ಈ ಲೇಖನದ ಉದ್ದೇಶವಾಗಿದೆ.

**KEYWORDS:**

ಪ್ರಗತಿಪರ ಚಿಂತನೆ, ಬಹುಪತ್ನಿತ್ವ, ವರದಕ್ಷಿಣಿ, ಜಮಿನ್ದಾರ ಪದ್ಧತಿ, ಸಮಾಜಮುಖಿ ನಿಲುವು, ಚಾಜ.

ಮಾನವನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಸ್ಥಿತಿಗತಿಗಳ ಸಮಸ್ಯೆ-ಸಂಘರ್ಷಗಳ ಚಿತ್ರಣದ ಜೊತೆಗೆ ಸ್ತ್ರೀ ಶೋಷಣೆಯ ನೇತಾರರಾದ ದೇಸಾಯಿಯ ವಿರುದ್ಧ ಪ್ರತಿಭಟನೆಯನ್ನು ತೋರಿದ ಮಹಿಳಾ ಪಾತ್ರಗಳನ್ನು ಕೂಡಾ 'ಚಾಜ' ನಾಟಕದಲ್ಲಿ ಕಾಣುತ್ತೇವೆ. ಜೊತೆಗೆ ಮೌಢ್ಯದಲ್ಲಿ ಮುಳುಗಿ ಹೋದ, ಅಜ್ಞಾನದಲ್ಲಿ ಮಿಂದ ಜನರಿಗೆ ಅರಿವಿನ ದೀಪ ಹಚ್ಚಿ ಹೊಸ ಸಮಾಜ ನಿರ್ಮಿತಿಗೆ ದಾರಿದೀಪ ಈ 'ಚಾಜ' ನಾಟಕವಾಗಿದೆ.

'ಚಾಜ' ನಾಟಕದ ಅವಲೋಕನದ ಹಿನ್ನೆಲೆಯಲ್ಲಿ 'ಚಾಜ' ಹೆಸರಿನಲ್ಲಿ ಮಹಿಳೆಗೆ ಆಗುತ್ತಿರುವ ಅನ್ಯಾಯ, ವೇದನೆ, ದೌರ್ಜನ್ಯವನ್ನು ತಡೆಗಟ್ಟುವಲ್ಲಿ ರುದ್ರಮ್ಮ-ಸಾವಂತ್ರಿ ಕಲ್ಲಿಯರ ಪಾತ್ರ ಪ್ರಮುಖವಾಗಿ ಕಂಡುಬರುತ್ತದೆ. ಇವರೊಂದಿಗೆ ಕೈಜೋಡಿಸಿದ ಬಸವಣ್ಣನವರ ಪಾತ್ರ ಇಡೀ ಪುರುಷ ಸಮಾಜಕ್ಕೆ ಮಾದರಿಯಾಗಿದೆ. ಉತ್ತಮ ಸಮಾಜ ನಿರ್ಮಾಣಕ್ಕೆ ಪುರುಷ ಮತ್ತು ಮಹಿಳೆಯರ ಪಾತ್ರ ಪ್ರಮುಖವೆಂದು ಸಾರುವಲ್ಲಿ ಕೈದೀವಿಗೆ ಈ ನಾಟಕ. ಹಾಗಾದರೆ ಚಾಜ ಎಂದರೇನು? ಎಂಬ ಪ್ರಶ್ನೆ ಏಳುವುದು ಸಹಜ. ಅದರ ಅರ್ಥವನ್ನು ಕೆಳಗಿನಂತೆ ಸ್ಪಷ್ಟಪಡಿಸಲಾಗಿದೆ.

'ಚಾಜ' ಎಂದರೇನು? 'ಚಾಜ' ಎಂದರೆ 'ನಿಯಮ' ಅಥವಾ 'ಪದ್ಧತಿ' ಎಂದರ್ಥ. ಇದು ವಿಜಾಪೂರ ಜಿಲ್ಲೆಯ ತುಂಬ ಹಾಗೂ ಉತ್ತರ ಕರ್ನಾಟಕದ ಹೆಚ್ಚಿನ ಹಳ್ಳಿಗಳಲ್ಲಿ ಈ 'ಚಾಜ' ಬಳಕೆಯಲ್ಲಿದೆ. ಚಾಜ ನಾಟಕದಲ್ಲಿ ಪ್ರಮುಖವಾಗಿ ಎರಡು ಪದ್ಧತಿಗಳ ಮೂಲಕ ಸಂಘರ್ಷ ಏರ್ಪಡುತ್ತದೆ. ಅವುಗಳೆಂದರೆ;

1. ಜಮೀನ್ದಾರಿ ವ್ಯವಸ್ಥೆಯಲ್ಲಿ ಮದುವೆಯ ನಂತರ ಮನೆಗೆ ಬರಬೇಕಾದ ಸೊಸೆ ಊರ ಗೌಡ ಅಥವಾ ದೇಸಾಯಿಯ ಮನೆಯಲ್ಲಿ ಅವನ ತೆಕ್ಕೆಯಲ್ಲಿ (ಮೊದಲ ರಾತ್ರಿ) ಕಳೆಯಬೇಕಾಗಿತ್ತು.

2. ಹಬ್ಬ–ಹರಿದಿನದ ಎಲ್ಲಾ ಕ್ರಿಯೆಗಳು ಗೌಡ, ದೇಸಾಯಿಗಳ ಮನೆಯಿಂದ ಮತ್ತು ಅವರ ನಾಯಕತ್ವದಲ್ಲಿಯೇ ಆರಂಭಗೊಳ್ಳಬೇಕಾಗಿತ್ತು.

ಇವೆರಡೂ ಪದ್ಧತಿಗಳಲ್ಲಿ ಮೊದಲನೇ ಪದ್ಧತಿಯನ್ನು ಮೂಲವಾಗಿಟ್ಟುಕೊಂಡು ಅದರಲ್ಲಿ ಮಹಿಳಾ ಸಂಘರ್ಷವನ್ನು ಬಿಂಬಿಸುವುದು ಈ ಲೇಖನದ ಉದ್ದೇಶವಾಗಿದೆ.

**ಚಾಜ ನಾಟಕದಲ್ಲಿ ವ್ಯಕ್ತವಾದ ಮಹಿಳಾ ಸಂಘರ್ಷದ ಅಂಶಗಳು:**

1. ರುದ್ರಮ್ಮಳ ಸಾಂಪ್ರದಾಯಿಕ ನಿಲುವು
2. ಸಾವಂತ್ರಿಯ ಪ್ರಗತಿಪರ ನಿಲುವು
3. ಸ್ತ್ರೀ ಶೋಷಣೆಯ ವಿರುದ್ಧ ರುದ್ರಮ್ಮ–ಕಲ್ಲಿಯರ ತಂತ್ರ
4. ಸಾವಂತ್ರಿ–ಬಸವಣ್ಣನವರ ಹೊಸ ಸಮಾಜಮುಖಿ ವಿಚಾರಧಾರೆ

**1. ರುದ್ರಮ್ಮಳ ಸಾಂಪ್ರದಾಯಿಕ ನಿಲುವು**

ರುದ್ರಮ್ಮ ದೇಸಾಯಿಯ ಮೊದಲನೇ ಹೆಂಡತಿಯಾಗಿ ಹಿರಿಯ ದೇಸಾಯಿನಿಯಾಗಿ 'ಪತಿಯೇ ಪರದೈವ', 'ಪಾಲಿಗೆ ಬಂದದ್ದು ಪಂಚಾಮೃತ' ಎಂಬ ಸಾಂಪ್ರದಾಯಿಕ ನಿಲುವಿನೊಂದಿಗೆ ದೇಸಾಯಿಯ ಅನ್ಯಾಯ–ದೌರ್ಜನ್ಯವನ್ನೆಲ್ಲಾ ಸಹಿಸಿಕೊಂಡು, ಬದುಕನ್ನು ಸಾಗಿಸುವಳು. ಪತಿಯ ಎದುರಿಗೆ ನಿಂತು ಮಾತನಾಡುವಂತಹ ಧೈರ್ಯ ಗುಂದಿದವಳು. ಶೋಷಣೆಯ ವಿರುದ್ಧ ಪ್ರತಿಭಟಿಸಲು ಹಿಂಜರಿಯುವಳು. ಕಾರಣ ಹೆಣ್ಣಿನ ಬಗೆಗಿರುವ ಸಾಂಪ್ರದಾಯಿಕ ನಂಬಿಕೆಗಳನ್ನು, ಅಸಹಾಯಕತೆಯನ್ನು ರುದ್ರಮ್ಮಳ ಪಾತ್ರದಲ್ಲಿ ಕಾಣುತ್ತೇವೆ. ಹೆಣ್ಣಿನ ಜನ್ಮದ ಬಗೆಗಿರುವ ರುದ್ರಮ್ಮಳ ನಿಲುವುಗಳೆಂದರೆ: ಎಷ್ಟೇ ಕಷ್ಟ ಬಂದ್ರು ಹೆಣ್ಣಾದವಳು ನುಂಗಬೇಕು ಎಂದರೆ ಮಹಿಳೆಗೆ ಎಂಥವನೇ ಗಂಡನಿದ್ದರೂ, ಎಂತಹ ಕಷ್ಟಗಳಿದ್ದರೂ, ದೌರ್ಜನ್ಯವಿದ್ದರೂ ಸಹಿಸಿಕೊಂಡು ಬಾಳ್ವೆ ಮಾಡಬೇಕು ಎನ್ನುತ್ತಾಳೆ.

'ಹೆಣ್ಣಿನ ಜನ್ಮ ಹೂವಿನ ಹಾಗೆ ಪರಿಮಳ ಬೀರಿ ತಾ ಬಾಳಬೇಕು ಕೊಟ್ಟವರ ಮನೆಯಲ್ಲಿ ಕೊಂಡವರ ಮನದಲ್ಲಿ ದೀಪದ ಹಾಗೆ ತಾ ಬಾಳಬೇಕು'ಎಂಬ ಜನಪದ ತ್ರಿಪದಿಯು ರುದ್ರಮ್ಮಳ ನಿಲುವಿಗೆ ಪೂರಕವಾಗಿ ಬಳಕೆಯಾಗುತ್ತದೆ. ಮಹಿಳೆ ತಾ ಸುಟ್ಟುಕೊಂಡರೂ ಪರರಿಗೆ ಬೆಳಕನ್ನು ನೀಡಬೇಕು ಮತ್ತು ಹೂ ಪರರಿಗೆ ಪರಿಮಳ ನೀಡಿ ತನ್ನ ಜೀವನವನ್ನು ಹೇಗೆ ಸಾರ್ಥಕ್ಯ ಮಾಡಿಕೊಳ್ಳುತ್ತದೆಯೇ ಹಾಗೇ ಹೆಣ್ಣು ತಗ್ಗಿ ಬಗ್ಗಿ ಸಕಲ ಸಂಕಷ್ಟಗಳನ್ನು ಸಹಿಸಿಕೊಂಡು ಬಾಳಬೇಕೆಂಬುದು ರುದ್ರಮ್ಮಳ ಸಾಂಪ್ರದಾಯಿಕ ನಿಲುವಾಗಿದೆ. ಹೆಣ್ಣಬಾರಗಿ ಜಲ್ಮ ಗಂಡನ ಪಾದದಾಗ ಜೀವ ಬಿಟ್ರ ಮುತ್ತೈದೆಯಾಗಿ ಮುಗಿಲಾಗ ಚಿಕ್ಕಿಯಾಗಿರತಾರಂತ ನಂಬಿ ಮುತ್ತೈದೆ ಸಾವು

ಕೊಡೋ ಶಿವನೇ ಎಂದು ದೇವರಿಗೆ ಮೊರೆ ಹೋಗುವುದು. ಹೆಣ್ಣಿನ ಜನ್ಮಕ್ಕೆ ಹಲವಾರು ನಂಬಿಕೆಗಳನ್ನು ಭದ್ರಪಡಿಸಿ ಗಂಡನ ಸೇವೆ ಮಾಡಿದರೆ, ಅವನು ಮರಣ ಹೊಂದಿದ ನಂತರ ಅವನ ಜೊತೆಗೆ ಚಿತೆಗೆ ಏರಿದರೆ ಸ್ವರ್ಗ ಪ್ರಾಪ್ತಿಯಾಗುವುದು, ಪರಲೋಕದಲ್ಲಿ ಹೋಗಿ ಆತನನ್ನು ಸೇರಬಹುದೆಂಬ ಹಲವಾರು ನಂಬಿಕೆಗಳು ಹೆಣ್ಣಿನ ಜನ್ಮಕ್ಕೆ ಮಾರಕವಾಗಿ ಮೂಡಿಬಂದಿವೆ. ಈ ನಾಟಕದಲ್ಲಿ ಕೂಡಾ ರುದ್ರಮ್ಮ ಸಾವಂತ್ರಿಗೆ ಹೇಳುವ ಹೆಣ್ಣಿನ ಜನ್ಮದ ಸಾರ್ಥಕತೆಯನ್ನು ಅವಲೋಕಸಿದಾಗ ಹೆಣ್ಣಾದವಳು ಗಂಡನ ಪಾದದಾಗ ಜೀವ ಬಿಟ್ರ ಮುತ್ತೈದೆಯಾಗಿ ಚಿಕ್ಕಿಯಾಗಿರತಾರಂತ ಎನ್ನುವಲ್ಲಿ ಮೂಢತೆ ಎದ್ದು ಕಾಣುತ್ತದೆ. ಇದಕ್ಕೆ ಕಾರಣ ರುದ್ರಮ್ಮನಲ್ಲಿರುವ ಅನಕ್ಷರತೆ, ಸಾಂಪ್ರದಾಯಿಕ ಮನೋಭಾವದಲ್ಲಾದ ರುದ್ರಮ್ಮ ಗಂಡನ ದೌರ್ಜನ್ಯ, ದರ್ಪಗಳನ್ನೆಲ್ಲಾ ಸಹಿಸಿಕೊಂಡು ಎಲ್ಲರಿಗೂ ಬೇಕಾಗುವ ದೇಸಾಯಿನಿಯಾಗಿ ಕಂಡುಬರುತ್ತಾಳೆ. ತನ್ನ ಆಸೆ-ಕನಸುಗಳಿಗೆ ಗೋರಿ ಕಟ್ಟಿ ಹೆದರಿಕೆಯಿಂದ ಜೀವನವನ್ನು ಸಾಗಿಸುವಂತಹ ಮುಗ್ಧ ಮಹಿಳೆ ಇವಳು.

## 2. ಸಾವಂತ್ರಿಯ ಪ್ರಗತಿಪರ ನಿಲುವು

ಚಾಜ ನಾಟಕದಲ್ಲಿ ಸಾವಂತ್ರಿ ದೇಸಾಯಿಯ ಕಿರಿಯ ಹೆಂಡತಿ (ಕಿರಿಯ ದೇಸಾಯಿನಿ) ಯಾಗಿ ಪ್ರಮುಖ ಪಾತ್ರವನ್ನು ವಹಿಸಿದ್ದಾಳೆ. ಅನ್ಯಾಯದ ವಿರುದ್ಧ, ಅನಾಚಾರದ ವಿರುದ್ಧ ಧೈರ್ಯದಿಂದ ದಿಟ್ಟತನದಿಂದ ಹೆಜ್ಜೆ ಇಟ್ಟು ದೇಸಾಯಿಯ ವಿರುದ್ಧ ಪ್ರತಿಭಟಿಸಿ ನಿಂತ ಪ್ರಜ್ಞಾವಂತ, ಪ್ರಗತಿಪರ, ವೈಚಾರಿಕ ಮಹಿಳೆಯಾಗಿ ಕಂಡುಬರುತ್ತಾಳೆ. ಸಾವಂತ್ರಿಯ ಪ್ರಗತಿಪರ ವಿಚಾರಗಳು ಈ ಕೆಳಗಿನಂತಿವೆ:

* ಕೈಹಿಡಿದ ಹೆಂಡತಿಯರನ್ನು ತಿರಸ್ಕರಿಸುವ ದೇಸಾಯಿಯ ವಿರುದ್ಧ ಸಾವಂತ್ರಿಯ ಅರಿವು
* ಊರಿನಲ್ಲಿ ಚಾಜ ಹೆಸರಿನಲ್ಲಿ ಮಹಿಳೆಯರಿಗಾಗಿರುವ ಅತ್ಯಾಚಾರ, ಶೋಷಣೆಯ ವಿರುದ್ಧ ಸಾವಂತ್ರಿಯ ಪ್ರತಿಭಟನೆ
* ಮಹಿಳಾಪರ ಕಾನೂನಿನ ಅರಿವಿನ ಎಚ್ಚರಿಕೆ
* ಬಂಗಾರಕ್ಕಿಂತ-ಬಂಗಾರದಂತಹ ಮನಸ್ಸು ಮುಖ್ಯವೆಂಬ ವೈಚಾರಿಕ ವಿಚಾರಧಾರೆ

ಇತ್ಯಾದಿ ಪ್ರಗತಿಪರ ವಿಚಾರಗಳನ್ನು ಸಾವಂತ್ರಿಯ ಪಾತ್ರದಲ್ಲಿ ಕಂಡುಬರುತ್ತವೆ.

**ಕೈಹಿಡಿದ ಹೆಂಡತಿಯರನ್ನು ತಿರಸ್ಕರಿಸುವ ದೇಸಾಯಿಯ ವಿರುದ್ಧ ಸಾವಂತ್ರಿಯ ಅರಿವು:** ರುದ್ರಮ್ಮ, ಸಾವಂತ್ರಿಯರು ದೇಸಾಯಿಯ ಹೆಂಡತಿಯರು, ಇವರು ಪತಿಯಾದ ದೇಸಾಯಿಯಿಂದ ಕೊಂಚಷ್ಟು ನೆಮ್ಮದಿಯನ್ನು ಕಾಣದವರು. ಆದಕಾರಣ ಇದರ ವಿರುದ್ಧ ಪ್ರತಿಭಟನಾತ್ಮಕ ಮಾತುಗಳನ್ನಾಡುವಳು: "ಕಟಗೊಂಡಾಕಿ ಕೂಡಬಾಳೆ

ಮಾಡಾಕ ಆಗದಿದ್ರ, ಒಂದರ ಮ್ಯಾಲ ಒಂದ ಯಾಕ ಮದುವಿ ಆಗಬೇಕಾಗಿತ್ತು'' ಎನ್ನುವಲ್ಲಿ ವೈಚಾರಿಕ ನೆಲೆಯಲ್ಲಿ ದೇಸಾಯಿಯ ದುಷ್ಟತನದ ವಿರುದ್ಧ ಪ್ರಶ್ನಿಸುವಳು. ಜೊತೆಗೆ ಒಂಟಿ ಹೆಣ್ಣಿನ ಬದುಕನ್ನು ಸಮಾಜ ನೋಡುವ ದೃಷ್ಟಿಕೋನವನ್ನು ಬಿಚ್ಚಿಡುವಳು; ''ಮಾಡಿಕೊಂಡ ಗಂಡ ಕಟಗೊಂಡಾಕೀ ಮರತ ಇದ್ರ ಈ ಸಮಾಜ, ಜನರು ಏನು ಅನ್ನುವುದಿಲ್ಲ. ಆದರೆ ಅದೇ ಸಮಾಜ ಹೆಂಡತಿಯಾದಕಿ ಗಂಡನ ಮನಿಗೆ ಹೋಗದಿದ್ದರೆ ನೂರಾ ಒಂದ ಮಾತನಾಡತಾರ'' ಎನ್ನುವ ಸಾವಂತ್ರಿಯ ಮಾತು ಸಮಾಜ ಮಹಿಳೆಗೆ ಆಡುವ ಚುಚ್ಚು ಮಾತುಗಳು, ಕಲ್ಪಿಸುವ ಸಂಬಂಧಗಳನ್ನು ಅನಾವರಣ ಮಾಡುತ್ತದೆ. ಇತ್ತ ತವರಿಗೂ ಎರವಾಗಿ, ಗಂಡನ ಪ್ರೀತಿಯನ್ನು ಕಾಣದೇ ಅದೆಷ್ಟೋ ಮಹಿಳೆಯರು ಬೆಂಕಿಯ ಬೇಗುದಿಯಲ್ಲಿ ಜೀವನ ನಡೆಸುತ್ತಿರುವರು. ಅಂಥವರಿಗೆ ಸಾವಂತ್ರಿಯ ದಿಟ್ಟತನದ ಹೆಜ್ಜೆ ಮಾದರಿಯಾಗಿದೆ.

**ಊರಿನಲ್ಲಿ ಚಾಜ ಹೆಸರಿನಲ್ಲಿ ಮಹಿಳೆಯರಿಗಾಗಿರುವ ಅತ್ಯಾಚಾರ, ಶೋಷಣೆಯ ವಿರುದ್ಧ ಸಾವಂತ್ರಿಯ ಪ್ರತಿಭಟನೆ:** ಸಾವಂತ್ರಿ ದೇಸಾಯಿಯ ಎದುರು ನಿಂತು ಮಾತನಾಡಿದ ಕಾರಣ ಅಸಹಾಯಕತೆಯಿಂದ ದೇಸಾಯಿ ''ಈ ವಾಡೇದ ಪಾಯಾದಾಗ ನೂರಾ ಒಂದ ಹೆಂಗಸರನ್ನು ಹುಗಿದ ಕಟ್ಟಿದ್ದಕರ ಕಿಮ್ಮತ್ ಬ್ಯಾಡಾ. ತೋರಸತೀನಿ ನನ್ನ ಬಂದೂಕಿನಾಗಿನ ಬಲಾ'' ಎಂದು ಸಾವಂತ್ರಿಯ ಮೇಲೆ ಹರಿಹಾಯುವುದನ್ನು ಕಂಡರೆ ಮಹಿಳೆಯರನ್ನು ಉಸಿರಾಡದೇ ಜೀವಂತ ಶವವಾಗಿ ಮಾಡಿದಂತಹ ಅದೆಷ್ಟೋ ಮಹಿಳೆಯರ ಶೋಷಣೆ ನಮ್ಮ ಕಣ್ಣ ಮುಂದೆ ಕಟ್ಟುತ್ತದೆ. ಆದಕಾರಣ ಊರಿನಲ್ಲಿ 'ಚಾಜ' ಹೆಸರಿನಲ್ಲಿ ಮಹಿಳೆಯರಿಗಾಗುವ ಶೋಷಣೆಯ ವಿರುದ್ಧ ಸಾವಂತ್ರಿ ಪ್ರತಿಭಟನೆ ಮಾಡುತ್ತಾಳೆ.

**ಮಹಿಳಾಪರ ಕಾನೂನಿನ ಅರಿವಿನ ಎಚ್ಚರಿಕೆ:** ಶೋಷಣೆಯನ್ನು ಕಂಡ ಸಾವಂತ್ರಿ ದೇಸಾಯಿಯ ಮಾತಿಗೆ ತಿರುಗೇಟು ಕೊಡುತ್ತಾ ಮಹಿಳಾಪರ ಕಾನೂನಿನ ಅರಿವನ್ನು ದೇಸಾಯಿಗೆ ತಿಳಿಸುವುದರೊಂದಿಗೆ ಇಡೀ ಪುರುಷ ಸಮಾಜಕ್ಕೆ ಪರಿಚಯಿಸುವಳು. ದೇಸಾಯಿಗೆ ಸಾವಂತ್ರಿ ''ಮೊದಲಿನಂಗ ಹಡೂದ, ಮುಚ್ಚುದ ಮಾಡಿದ್ರ ದಕ್ಕಿಸಿ ಕೊಳ್ಳೋದು ಬಾಳ ಕಷ್ಟ ಐತಿ, ನನ್ನ ತಲಿಯಾಗಿನ ಕೂದಲ, ಕೂದಲಾ ಕೊಂಕಿದ್ರ ನಿನ್ನ ವಾಡೇದ ಚೀಪಗಲ್ಲ ಉಳಿಯಾಕಿಲ್ಲ ತಿಳಿಕೋ'' ಎಂದು ದೇಸಾಯಿಗೆ ಎಚ್ಚರಿಸುತ್ತಾ ಮಹಿಳಾಪರ ಇರುವ ಕಾನೂನುಗಳ ಅರಿವು, ಹೆಣ್ಣುಮಕ್ಕಳ ಮೇಲೆ ಕೈ ಮಾಡಿದರೆ ಆಗುವಂತಹ ಪರಿಣಾಮಗಳ ಕುರಿತು ಎಚ್ಚರಿಕೆ ನೀಡುತ್ತಾಳೆ.

**ಬಂಗಾರಕ್ಕಿಂತ ಬಂಗಾರದಂತಹ ಮನಸ್ಸು ಮುಖ್ಯವೆಂಬ ವೈಚಾರಿಕ ವಿಚಾರಧಾರೆ:** ವಾಡೇದ ತುಂಬೆಲ್ಲಾ ಅವರಿಗೆ ಸಿರಿವಂತಿಕೆ–ಬಂಗಾರ ತುಂಬಿ ತುಳುಕುವುದು. ಆದರೆ ಮನೆಯ ಭಯ–ಭೀತಿಗಳ ವಾತಾವರಣದಿಂದ

ಆವರಿಸಿರುವುದು, ಇದನ್ನು ಕಂಡು ಸಾವಂತ್ರಿಗೆ ಬೇಸತ್ತು ಹೋಗಿತ್ತು. ಅದಕ್ಕಾಗಿ ರುದ್ರಮ್ಮಳೊಂದಿಗೆ ತನ್ನ ವಿಚಾರವನ್ನು ಹಂಚಿಕೊಳ್ಳುವಳು. ಅದೇನೆಂದರೆ; 'ನಾ ಬೆಳಕ ನೋಡಬೇಕು. ಆ ಬೆಳಕಿನಾಗ ಸುಂದರವಾದ ಜಗತ್ತು ನೋಡಬೇಕು, ಸುಖ-ದುಃಖ ಅನುಭವಿಸಬೇಕು. ಮೈಮೇಲೆ ಮಣಾ ಬಂಗಾರ ಹೇರಕೊಂಡ ರೇಷ್ಮೆ ಸೀರಿ ಉಟಕೊಂಡ ಕುಂತರ ಸುಖದಿಂದ ಅದೀವಿ ಅಂತ ಅಲ್ಲಾ. ಈ ಮನೆಯೊಳಗ ಹಾಲು ತುಪ್ಪದ ಹಳ್ಳ ಹರಿಯುತ್ತ, ಆದರೆ ಕುಡಿಯಾಕ ನೀರಿಲ್ಲ' ಎನ್ನುವಲ್ಲಿ ಆಕೆ ಮನೆಯಲ್ಲಿ ಒಳ್ಳೆಯ ಮನಸ್ಸುಗಳ ಅವಶ್ಯಕತೆಯನ್ನು ಅಪೇಕ್ಷಿಸುತ್ತಾಳೆ, ಬಂಗಾರ ಇದೆ ಅಂದರೆ ಅದನ್ನೇ ಆಹಾರವಾಗಿ ಸ್ವೀಕರಿಸಲು ಸಾಧ್ಯವಿಲ್ಲ. ಮನೆಯೊಳಗೆ ತುಪ್ಪದ ಕೊಡ ತುಂಬಿಟ್ಟರ ದಾಹ ನೀಗಿಸಲು ಅದರಿಂದ ಸಾಧ್ಯವಿಲ್ಲ. ಅದಕ್ಕೆ ನೀರೇ ಬೇಕು. ಹಾಗೆಯೇ ಸಮೃದ್ಧಿ ಜೀವನಕ್ಕೆ ಉತ್ತಮ ಮನಸ್ಸುಗಳ ಅವಶ್ಯಕತೆ ಇದೆ ಎಂದು ಹೇಳುವಲ್ಲಿ ಸಾವಂತ್ರಿಯ ವೈಚಾರಿಕ ವಿಚಾರಧಾರೆ ಇಡೀ ಸಮಾಜಕ್ಕೆ ಪೂರಕವಾಗಿ ನಿಲ್ಲುತ್ತದೆ.

## 3. ಸ್ತ್ರೀ ಶೋಷಣೆಯ ವಿರುದ್ಧ ರುದ್ರಮ್ಮ-ಕಲ್ಲಿಯರ ತಂತ್ರ

ರುದ್ರಮ್ಮ ಅನಕ್ಷರಸ್ಥಳಾಗಿದ್ದರೂ ಸಹ ತಿಳುವಳಿಕೆ ಉಳ್ಳವಳು. ಸಾವಂತ್ರಿಯನ್ನು ಸವತಿಯಂತೆ ಕಾಣದೇ ಸ್ವಂತ ತಂಗಿಯ ಹಾಗೇ ಕಂಡು ದೇಸಾಯಿ 'ಚಾಜ' ಹೆಸರಿನಲ್ಲಿ ಮಾಡುವಂತಹ ಬಡ ಹೆಣ್ಣುಮಕ್ಕಳ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು ತಿಳಿದು ಕಲ್ಲಿಯೊಡನೆ ಸೇರಿ ಆ ಊರಿನ ಹೆಣ್ಣುಮಕ್ಕಳ ಮಾನವನ್ನು ಕಾಪಾಡಲು ಸಹಾಯ ಮಾಡಿರುವಳು. ಕಲ್ಲಿ ದೇಸಾಯಿಯ ಮನೆಯ ಕೆಲಸದವಳಾಗಿದ್ದರೂ 'ಚಾಜ'ದ ಪದ್ಧತಿಯ ವಿರುದ್ಧ ದೇಸಾಯಿಗೆ ತಿಳಿಯದ ಹಾಗೇ ದುರುಗಪ್ಪನ ಸಹಾಯದೊಂದಿಗೆ ಚಾಜದ ದಿನ ಸೇರ ಅಚ್ಚೇರ ತಂಬಾಕ ತುಂಬ ಸೇದುತ್ತಿದ್ದ ದೇಸಾಯಿಗೆ ಅದರಲ್ಲಿ ಗಾಂಜಾ ತಿಕ್ಕಿ ಹಾಕಿರುತ್ತಿದ್ದಳು. ಇದರಿಂದ ದೇಸಾಯಿ ಮೈಮೇಲೆ ಎಚ್ಚರ ಇಲ್ಲದ ಹಾಗೆ ಮಲಗಿದ ಮೇಲೆ ಆ ಹೆಣ್ಣುಮಗಳನ್ನು ತಂದು ರುದ್ರಮ್ಮಳ ಹತ್ತಿರ ಮಲಗಿಸಿ ಹೊತ್ತು ಹೊಂಡುವುದಕ್ಕೆ ಮುಂಚೆಯೇ ಎಬ್ಬಿಸಿ, ಸ್ನಾನ ಮಾಡಿಸಿ ಗುಡಿ ಮುಂದೆ ಉಡಿ ತುಂಬಿ ಕಳುಹಿಸಿ ಬಿಡುತ್ತಿದ್ದಳು. ಇದರಿಂದ ಎಷ್ಟೋ ಮಹಿಳೆಯರ ಮಾನ ಕಾಪಾಡಿದಂತಹ ಯುಕ್ತಿ ಕಲ್ಲಿ, ರುದ್ರಮ್ಮ, ದುರುಗಪ್ಪನಿಂದ ನೆರವೇರಿದೆ. ಜೊತೆಗೆ ಸ್ತ್ರೀ ಶೋಷಣೆಯ ವಿರುದ್ಧ ಪ್ರಗತಿಪರ ವಿಚಾರಧಾರೆಯಾದ ಪುರುಷ ಪ್ರಧಾನ ಪಾತ್ರವಾದ ಬಸವಣ್ಣನು ಸಹ ಸಾವಂತ್ರಿ-ಕಲ್ಲಿಯೊಂದಿಗೆ ಸೇರಿ ಮಹಿಳೆಯರಿಗಾಗುವ ಅನ್ಯಾಯವನ್ನು ತಡೆಗಟ್ಟುತ್ತಾನೆ.

## 4. ಸಾವಂತ್ರಿ-ಬಸವಣ್ಣನವರ ಹೊಸ ಸಮಾಜಮುಖಿ ವಿಚಾರಧಾರೆ

ಸಾವಂತ್ರಿ ಬಸವಣ್ಣನವರ ನಿಲುವು ಒಂದೇಯಾಗಿದೆ. ಅದೇನೆಂದರೆ ಜನರನ್ನು ಮೌಢ್ಯತೆಯಿಂದ ಹೊರತರುವುದು ಆರೋಗ್ಯಕರ ಸಮಾಜವನ್ನು ನಿರ್ಮಿಸುವುದು,

ಬಡತನ, ಅಜ್ಞಾನ, ಅನಕ್ಷರತೆ, ಮೂಢನಂಬಿಕೆ, ದುಶ್ಚಟಗಳನ್ನು ಬಿಟ್ಟು ಹೊಸ ಸಮಾಜ ನಿರ್ಮಿತಿಗೆ ಜನರನ್ನು ಸಿದ್ಧ ಮಾಡುವುದಾಗಿದೆ. 'ಜಾಜ' ನಾಟಕದಲ್ಲಿ ಬರುವ ಪ್ರಮುಖ ಎರಡು ಪದ್ಧತಿಗಳನ್ನು ಕಿತ್ತೊಗೆದು ಇಡೀ ಸಮಾಜಕ್ಕೆ ಮಾದರಿಯಾಗಿರುವ ಪಾತ್ರ ಸಾವಂತ್ರಿ–ಬಸವಣ್ಣನವರದು.

'ಜಾಜ'ದ ಹೆಸರಿನಲ್ಲಿ ನಡೆದ ದಬ್ಬಾಳಿಕೆಯ ವಿರುದ್ಧ ಬಸವಣ್ಣನು ಕೈಜೋಡಿಸುವುದು ಪುರುಷ ಪ್ರಧಾನ ಮೌಲ್ಯದ ಸಂಕೇತವಾಗಿ ಗೋಚರಿಸುತ್ತದೆ. ಪುರುಷ ವ್ಯವಸ್ಥೆಯಲ್ಲಿ ನರಳುತ್ತಿರುವ ಎಲ್ಲ ಜಾತಿಯ ಮಹಿಳೆಯರಿಗೂ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಹಾಯಕವಾಗಿದೆ. ರಕ್ತದೋಕುಳಿಯ ಹೋರಾಟವಾಗಬೇಕಾಗಿದ್ದ ದೇಸಾಯಿ–ಹೊಸದೇಸಾಯಿ (ರಮೇಶ) ಹೋರಾಟವನ್ನು ಪರಿವರ್ತನೆಗೆ ತಂದವರು ಸಾವಂತ್ರಿ ಬಸವಣ್ಣನವರು.

"ಕತ್ತಲೆಯ ಗರ್ಭಸೀಳಿ ಬೆಳಕಿನ ಉದಯದೊಳಗೆ ಹೊಂಬಣ್ಣದ ಕಾಮ ಬಿಲ್ಲು ಮೂಡಿತು" ಎನ್ನುವಲ್ಲಿ ಅಜ್ಞಾನದಿಂದ ಜ್ಞಾನದೆಡೆಗೆ, ಕತ್ತಲೆಯಿಂದ ಬೆಳಕಿನಡೆಗೆ, ಜನರನ್ನು ಪರಿವರ್ತಿಸಿ ಜನರ ಬದುಕಿಗೆ ದೀಪವಾದವರು (ಅರಿವಿನ ದೀಪ), ಬೆಳಕಾದವರು ಸಾವಂತ್ರಿ–ಬಸವಣ್ಣನವರು.

ಹೀಗೆ ಅಜ್ಞಾನದಲ್ಲಿ, ಮೌಢ್ಯತೆಯಲ್ಲಿ ಮುಳುಗಿ ಹೋದ ಜನರಿಗೆ ಬಸವಣ್ಣ ಮತ್ತು ಸಾವಂತ್ರಿಯರ ಸಮಾಜಮುಖಿ ವಿಚಾರಧಾರೆ ಇಡೀ ಸಮಾಜಕ್ಕೆ ಬೆಳಕನ್ನು ತೋರುತ್ತದೆ. ದಲಿತರು ಸೇಡು ತೀರಿಸಿಕೊಳ್ಳಬೇಕಾಗಿರುವುದು ಮೇಲ್ಜಾತಿಯವರ ಮೇಲಲ್ಲ ಜಾತಿ ವ್ಯವಸ್ಥೆಯ ವಿರುದ್ಧ. 'ಜಾಜ'ದ ಹೆಸರಿನಲ್ಲಿ ನಡೆಯುತ್ತಿರುವ ದಬ್ಬಾಳಿಕೆಯ ವಿರುದ್ಧ ಎಂಬುದನ್ನು ಬಿತ್ತರಿಸುತ್ತಾ ಬಡವರು, ದಲಿತರು, ಮಹಿಳೆಯರು ವ್ಯವಸ್ಥೆಯ ವಿರುದ್ಧ ಹೋರಾಡಿ ನ್ಯಾಯವನ್ನು ದೊರಕಿಸಿಕೊಳ್ಳಬಲ್ಲವೆಂಬ ಭವಿಷತ್ತಿನ ಕರೆ ಇದರಲ್ಲಡಗಿದೆ.'

## ಆಕರ ಗ್ರಂಥ:

1. ಮಲ್ಲಿಕಾ ಘಂಟಿ. (2015). ಚಾಜ. ಗೌತಮ ಪ್ರಕಾಶನ. ಬಳ್ಳಾರಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.